


# ವೇದಗಣಿತ, ವ್ಯಕ್ತಿತ್ವ ವಿಕಸನದಿಂದ ಆಲೋಚನಾ ಸಾಮರ್ಥ್ಯ ಹೆಚ್ಚಳ: ಅಂಕುಶ್

**ಸಾಗರ ಸಾಮ್ರಾಟ ಸಮಾಚಾರ**

**ಹಳಿಯಾಳ:** ವೇದ ಗಣಿತ ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ಅಂಕುಶ್ ದುರ್ಗಿ ಹೇಳಿದರು.

ಪಟ್ಟಣದ ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದಲ್ಲಿ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಉಪನ್ಯಾಸಕರಾಗಿ ಕಾರ್ಯಕ್ರಮಕ್ಕೆ ಬೆಳಗಾವಿಯ ಅಂಕುಶ್ ದುರ್ಗಿ ಆಗಮಿಸಿದ್ದರು.

ವೇದ ಗಣಿತದ ಮಹತ್ವ, ಜಟಿಲವಾದ ಗಣಿತದ ಲೆಕ್ಕವನ್ನು ವೇದ ಗಣಿತದ ಮುಖಾಂತರ ಸುಲಭವಾಗಿ ಪರಿಹರಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವೇದಗಣಿತವನ್ನು ಕಲಿಯುವುದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನಾ ಮತ್ತು ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಓದುವ ಹಾಗೂ ಬರವಣಿಗೆಯ ಹವ್ಯಾಸಗಳು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವುದೆಂದು ಹೇಳಿದರು. ಇಂಗ್ಲೀಷ್ ವ್ಯಾಕರಣ ಹಾಗೂ ಬರವಣಿಗೆಯಲ್ಲಿ ಪದಗಳ ಸಮರ್ಪಕ ಬಳಕೆಯ ಕುರಿತು ವಿವರಣೆ ನೀಡಿದರು.

ಡಾ. ಸಮೀರ ಗಲಗಲಿ ಸಭಿಕರನ್ನು ಸ್ವಾಗತಿಸಿದರು. ಡಾ. ರವೀಂದ್ರ ಮುನ್ನೋಳ್ಳಿ ವಂದಿಸಿದರು. ಡಾ. ಸುಬ್ರಹ್ಮಣ್ಯ ಎಸ್ ನಿರೂಪಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಸುಧೀಂದ್ರ ಯಲಗೂರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

ಐ ಎಸ್ ಟಿ ಇ ವಿದ್ಯಾರ್ಥಿ ಘಟಕ , ಆವಿಷ್ಕಾರ ಪರಿಷತ್ತು ಮತ್ತು ವಿಜ್ಞಾನ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ 150ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯ ಇಮ್ಮಡಿಗೊಳಿಸಲು ಹಾಗೂ ವ್ಯಕ್ತಿತ್ವ ವಿಕಸನದ ಕುರಿತು ಅರಿವು ಮೂಡಿಸಲು ಈ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ.

# ವೇದಗಣಿತ ಕಲಿಕೆಯಿಂದ ಆಲೋಚನಾಶಕ್ತಿ ಹೆಚ್ಚಳ

**ಹಳಿಯಾಳ:** ವೇದಗಣಿತವನ್ನು ಕಲಿಯುವುದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನಾಶಕ್ತಿ ಮತ್ತು ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ಬೆಳಗಾವಿಯ ವೇದಗಣಿತ ಪರಿಣತ ಅಂಕುಶ ದುರ್ಗಿ ಹೇಳಿದರು.

ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಇತ್ತೀಚೆಗೆ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಟಿಲವಾದ ಗಣಿತದ ಲೆಕ್ಕವನ್ನು ವೇದ ಗಣಿತದ ಮುಖಾಂತರ ಸುಲಭವಾಗಿ ಪರಿಹರಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟ ಅವರು, ವೇದ ಗಣಿತ ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಓದುವ ಹಾಗೂ ಬರವಣಿಗೆಯ ಹವ್ಯಾಸಗಳು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುತ್ತವೆ ಎಂದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿ ಎ ಕುಲಕರ್ಣಿ, ಡಾ. ಸಮೀರ ಗಲಗಲಿ, ಡಾ. ರವೀಂದ್ರ ಮುನ್ನೋಳ್ಳಿ, ಡಾ. ಸುಬ್ರಹ್ಮಣ್ಯ ಎಸ್., ಆವಿಷ್ಕಾರ ಪರಿಷತ್ತಿನ ಅಧ್ಯಕ್ಷ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಸುಧೀಂದ್ರ ಯಲಗೂರ ಉಪಸ್ಥಿತರಿದ್ದರು.




**ಹಳಿಯಾಳದಲ್ಲಿ ಆಯೋಜಿಸಿದ್ದ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ವೇದಗಣಿತ ಪರಿಣತ ಅಂಕುಶ ದುರ್ಗಿ ಅವರನ್ನು ಗೌರವಿಸಲಾಯಿತು. ಡಾ. ಸಮೀರ ಗಲಗಲಿ, ಡಾ. ರವೀಂದ್ರ ಮುನ್ನೋಳ್ಳಿ, ಡಾ. ಸುಬ್ರಹ್ಮಣ್ಯ ಎಸ್., ಡಾ. ಮಹೇಂದ್ರ ದೀಕ್ಷಿತ್, ಇದ್ದರು.**

# ವೇದಗಣಿತ ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಯಶಸ್ವಿ

ನುಡಿಜೇನು ವರದಿ

**ಹಳಿಯಾಳ:** ವೇದ ಗಣಿತ ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ಅಂಕುಶ್ ದುರ್ಗಿ ಹೇಳಿದರು. ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.




ಉಪನ್ಯಾಸಕರಾಗಿ ಕಾರ್ಯಕ್ರಮಕ್ಕೆ ಬೆಳಗಾವಿಯ ಅಂಕುಶ್ ದುರ್ಗಿ ಆಗಮಿಸಿದ್ದರು. ವೇದ ಗಣಿತದ ಮಹತ್ವ, ಜಟಿಲವಾದ ಗಣಿತದ ಲೆಕ್ಕವನ್ನು ವೇದ ಗಣಿತದ ಮುಖಾಂತರ ಸುಲಭವಾಗಿ ಪರಿಹರಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವೇದ ಗಣಿತವನ್ನು ಕಲಿಯುವುದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನಾ ಮತ್ತು ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳ ಬಹುದಾಗಿದೆ ಎಂದು ಹೇಳಿದರು. ಓದುವ ಹಾಗೂ ಬರವಣಿಗೆಯ ಹವ್ಯಾಸಗಳು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವುದೆಂದು ಹೇಳಿದರು. ಇಂಗ್ಲೀಷ್ ವ್ಯಾಕರಣ ಹಾಗೂ ಬರವಣಿಗೆಯಲ್ಲಿ ಪದಗಳ ಸಮರ್ಪಕ ಬಳಕೆಯ ಕುರಿತು ವಿವರಣೆ ನೀಡಿದರು.

ಡಾ. ಸಮೀರ ಗಲಗಲಿ ಸಭಿಕರನ್ನು ಸ್ವಾಗತಿಸಿದರು. ಡಾ. ರವೀಂದ್ರ ಮುನ್ನೋಳ್ಳಿ ವಂದಿಸಿದರು. ಡಾ. ಸುಬ್ರಹ್ಮಣ್ಯ ಎಸ್ ನಿರೂಪಿಸಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಸುಧೀಂದ್ರ ಯಲಗೂರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಐಎಸ್‌ಟಿಇ ವಿದ್ಯಾರ್ಥಿ ಘಟಕ, ಆವಿಷ್ಕಾರ ಪರಿಷತ್ತು ಮತ್ತು ವಿಜ್ಞಾನ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ 150ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯ ಇಮ್ಮಡಿಗೊಳಿಸಲು ಹಾಗೂ ವ್ಯಕ್ತಿತ್ವ ವಿಕಸನದ ಕುರಿತು ಅರಿವು ಮೂಡಿಸಲು ಈ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ತಿಳಿಸಿದ್ದಾರೆ.